ಅವರಿಗೆ ಕೊಡುವ ದಿನಗೂಲಿ, ಡಿಪಿಎಪಿ ಯೋಜನೆಯಡಿಯಲ್ಲಿ ದಿನಕ್ಕೆ ರೂ. 16-00 ಮತ್ತು ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಡಿಯಲಿ ದಿನಕ್ಕೆ ರೂ. 18.20.

ಖ) ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಪ್ರೇರಕರು ಇರುವುದಿಲ್ಲ.

ಅನುಬಂಧ

	ವಿಶ್ವಬ್ಯಾಂಕ್		ಡಿಪಿಎಪಿ(ಕೆ)		ಜೆ.ಆರ್.ವೈ.		ಉರುವಲು ಕಟ್ಟಿಗೆ ಯೋಜನೆ		ಎಸ್‌ಸಿಪಿ	
	90-91	91-92	90-91	91-92	90-91	91-92	90-91	91-92	90-91	91-92
1. ಸಿಬ್ಬಂದಿ ವೇತನ	0.340	0.179	-	-	-	-	-	-	-	-
2. ನೆಲನು ತೋಪು ಪೋಷಣೆ	0.415	0.344	1.172	1.388	0.864	0.420	0.334	-	-	-
3. ನೆಡು ತೋಪು ಬೆಳೆಸುವುದು	0.622	0.695	0.968	0.723	-	0.207	0.270	-	-	0.013
4. ಸಸ್ಯ ಕ್ಷೇತ್ರ ಪೋಷಣೆ ಮತ್ತು ಬೆಳೆಸುವುದು	0.503	0.499	0.734	0.31	-	-	-	-	-	-
5. ಮುಂಗಡ (ತಗ್ಗು) ಕೆಲಸ	0.489	-	0.894	0.301	0.906	-	-	-	0.035	-
6. ಮಡಿಗಳಲ್ಲಿ ಸಸಿಗಳನ್ನು ಬೆಳೆಸುವುದು	0.127	0.024	0.076	0.026	-	-	-	-	-	-
7. ವಾಹನ ಖರ್ಚು	0.086	0.029	-	-	-	-	-	-	-	-
8. ಕಛೇರಿ ಖರ್ಚು	0.006	0.004	-	-	-	-	-	-	-	-
ಒಟ್ಟು	2.588	1.774	3.844	2.748	1.77	0.627	0.604	-	0.035	0.013

ದೊಡ್ಡೇರಿ ಹೋಬಳಿಯಲ್ಲಿ ಹರಿಜನರಿಗೆ ಖಾತೆ ಪಹಣಿ ಮಾಡುವ ಬಗ್ಗೆ.

989 (1325) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಕೊಟಗಾರ್ಲಹಳ್ಳಿ ರಿ.ಸ.ನಂ. 264 ರಲ್ಲಿ ಎಸ್‌ಪಿಎಲ್:ಎನ್‌ಡಿಎಂಜಿಆರ್:32:72-73, ದಿನಾಂಕ 30.12.1972 ರಂತೆ 3 ಜನರಿಗೆ ತಲಾ 4 ಎಕರೆ ಜಮೀನು ಮಂಜೂರಾತಿ ಪತ್ರ ನೀಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಯಾರು ಯಾರಿಗೆ ನೀಡಲಾಗಿದೆ, ಮಂಜೂರಾತಿ ಪಡೆದವರು ಸರ್ಕಾರಕ್ಕೆ ಖಾತೆ ಪಹಣಿ ಬಗ್ಗೆ ಅರ್ಜಿ ಸಲ್ಲಿಸುತ್ತಿರುವುದು ನಿಜವಲ್ಲವೆ;

ಇ) ಇವರುಗಳಿಗೆ ಖಾತೆ ಪಹಣಿ ನೀಡದೇ ಇರುವುದಕ್ಕೆ ಕಾರಣವೇನು?

ಈ) ಈಗಲಾದರೂ ಇವರಿಗೆ ಖಾತೆ ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ಹೌದು : ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಕೊಟಗಾರ್ಲಹಳ್ಳಿ ಗ್ರಾಮದ ರಿ.ಸ.ನಂ. 264ರಲ್ಲಿ 3 ಜನರಿಗೆ ತಲಾ 4-00 ಎಕರೆಯಂತೆ ಜಮೀನು ಮಂಜೂರಾತಿ ನೀಡಿರುವುದು ನಿಜವಾಗಿರುತ್ತದೆ.

ಆ) ಈ ಕೆಳಕಂಡ 3 ಜನರಿಗೆ ಮಂಜೂರಾತಿ ನೀಡಿದೆ :-

1)	ಶ್ರೀ ಹನುಮಂತಪ್ಪ ಬಿನ್ ಟಿ. ನಾಗಪ್ಪ	4.00 ಎಕರೆಗಳು
2)	ಶ್ರೀ ಮುದ್ದಪ್ಪ ಬಿನ್ ದೊಡ್ಡಹನುಮಂತಪ್ಪ	4.00 ಎಕರೆಗಳು
3)	ಶ್ರೀ ಹನುಮಂತಪ್ಪ ಬಿನ್ ನಾಗಪ್ಪ	4.00 ಎಕರೆಗಳು

ಹೌದು; ಮಂಜೂರಿದಾರರು ಖಾತೆ ಮತ್ತು ಪಹಣಿಗಳಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಇ) ಮಂಜೂರಿದಾರರಿಗೆ ಖಾತೆ ಮತ್ತು ಪಹಣಿಗಳನ್ನು ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈ) ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಇದು ಉದ್ಭವಿಸುವುದಿಲ್ಲ.

ಆರಾಧನಾ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆಗೆ ಖರ್ಚು ಮಾಡಿದ ಹಣ

991 (1683) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

1. "ಆರಾಧನಾ" ಯೋಜನೆಗೆ ಶಿವಮೊಗ್ಗ ಜಿಲ್ಲೆಗೆ ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?
2. ಈ ಹಣ ಜಿಲ್ಲೆಯಲ್ಲಿ ಈಗ ಉಪಯೋಗವಾಗಿದೇಯೆ? (ತಾಲ್ಲೂಕುವಾರು ವಿವರ ನೀಡುವುದು)
3. 1992-93ಕ್ಕೆ ಶಿವಮೊಗ್ಗ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ರಾಜಾ ಅಮರೇಶ ನಾಯಕ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

1. ರೂ. 22,74,850-00
2. ಹೌದು.

ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ.